ಪ್ರಬಂಧ

# ನಿದ್ದೆ ಬರುತ್ತಿದೆ ಎಚ್ಚರ



**ಪ್ರಜ್ಞಾ ಮತ್ತಿಹಳ್ಳಿ**
ಕಲೆ: ಗುಜ್ಜಾರ್

ನಮ್ಮ ಗಂಗತ್ತಾ ನಿದ್ದೆ ಎನ್ನುವುದು ಸುಮಾರು ಐವತ್ತು ವರ್ಷದಿಂದ ನಮ್ಮ ಕುಟುಂಬದಲ್ಲಿ ದಂತಕತೆಯಂತೆ ಎಲ್ಲರ ಬಾಯಲ್ಲಿ ನಲಿದಾಡುತ್ತಿದೆ. ಆಕೆಯೂ ಕೂಡ ಕನ್ನಡ ಚಾನೆಲ್ ಧಾರಾವಾಹಿಗಳಂತೆ ಒಂದು ಎಪಿಸೋಡಿನ ಬಗ್ಗೆ ಚರ್ಚೆ ಮುಗಿಯುವುದರೊಳಗೆ ಇನ್ನೊಂದು ಘಟನೆ ನಡೆಯುವಂತೆ ಅತ್ಯಂತ ಪ್ರಾಮಾಣಿಕ ಪ್ರಯತ್ನ ಮಾಡುತ್ತಾಳೆ. ಅವಳಿಗೆ ನಿದ್ದೆ ಮಾಡಲು ಹಾಸಿಗೆ- ದಿಂಬು ಇತ್ಯಾದಿ ಯಾವ ಪರಿಕರದ ಅವಶ್ಯಕತೆಯೂ ಇಲ್ಲ. ಕೂತುಕೂತಲ್ಲೇ ನಿದ್ದೆ ಹತ್ತಿ ಗೊರಕೆ ಹೊಡೆಯುತ್ತಾಳೆ. ಆಮೇಲೆ ಯಾರೇ ಕರೆದೂ, ಕೂಗಿದರೂ ಎಚ್ಚರವಾಗುವುದಿಲ್ಲ. ಜೋರಾಗಿ ಅಲುಗಾಡಿಸಿದರೂ ಗೊರಕೆಯ ಏರಿಳಿತ ಬದಲಾಗುತ್ತದೆಯೇ ಹೊರತು ಎಚ್ಚರವಾಗುವುದಿಲ್ಲ. ಈಗ ಐವತ್ತು ವರ್ಷದ ಹಿಂದೆ ಅವಳು ಮುಂಬೈಲಿ ಪಿ.ಎಚ್‌ಡಿ ಮಾಡುವಾಗ ತಾನು ಈ ದಿನಾಂಕದಂದು ಮುಂಬೈ-ಬೆಂಗಳೂರು ಬಸ್ಸಿಗೆ ಬರುತ್ತೇನೆಂದು ಪತ್ರ ಹಾಕಿದ್ದಳು. ಅವಳ ಅಣ್ಣ ಅಂದರೆ ನಮ್ಮ ತಂದೆ ಹಳ್ಳಿಯಿಂದ ಪೇಟೆಗೆ ಬಂದು ಆ ಬಸ್ ಸಮಯ ತಿಳಿದುಕೊಂಡು ಕಾಯುತ್ತಾ ಕುಳಿತರು. ಆ ಬಸ್ ಬಂದು ಕೆಲವೇ ನಿಮಿಷ ನಿಂತು ಒಂದಿಬ್ಬರು ಇಳಿದುಕೊಂಡ ನಂತರ ಮುಂದೆ ಬೆಂಗಳೂರು ಕಡೆ ಹೋಯಿತು. ನಮ್ಮ ಅಪ್ಪ ತನ್ನ ತಂಗಿ ಯಾಕೆ ಬರಲಿಲ್ಲ ಎಂದು ಚಟಪಟಿಸಿದ್ದಾರೆ. ಆಮೇಲೆ ಪೋಸ್ಟ್ ಆಫೀಸಿಗೆ ಹೋಗಿ ತಮ್ಮ ಹಳ್ಳಿಗೆ ಫೋನು ಮಾಡಿದ್ದಾರೆ. ಚಕ್ಕನೆ ನಮ್ಮ ಅಜ್ಜಿ ಕಾರಣ ಕಂಡು ಹಿಡಿದಿದ್ದಾಳೆ. “ಅಯ್ಯ ಗಂಗೆ ಮಹಾ ನಿದ್ದಂಡಿ, ಅದ್ಕೆ ಕೆಳಗೆ ಇಳಿದಿಲ್ಲ. ನೀನು ಬಸ್ ಮೇಲೆ ಹತ್ತಿ ಎಬ್ಬಿಸಬೇಕಾಗಿತ್ತು, ಮುಂದಿನ ಬಸ್ ನಿಲ್ದಾಣದಲ್ಲಿ ಇಳಿಬಹುದು. ಅವರ ಊಹೆಯಂತೆ ಗಂಗತ್ತಾ ಮುಂದಿನ ಊರಲ್ಲಿ ಇಳಿದು ಬೇರೆ ಬಸ್ ಹಿಡಿದು ಬಂದಳು. ಆಕೆಯ ನಿದ್ರಾಮೋಹ ಲೇಡಿಸ್ ಹಾಸ್ಟೆಲ್‌ನಲ್ಲಿ ಪ್ರಚಾರವಾಗಲು ಒಂದು ಘಟನೆ ಕಾರಣ. ಒಮ್ಮೆ ಆಕೆಯ ರೂಮ್ ಮೇಟ್ ಊರಿಗೆ ಹೋದಾಗ ಇವಳು ಮಧ್ಯಾಹ್ನ ಬಾಗಿಲು ಒಳಗಿಂದ ಚಿಲಕ ಹಾಕಿಕೊಂಡು ಓದುತ್ತಿದ್ದಳು. ಸ್ಟೌ ಮೇಲೆ ಹಾಲು ಕಾಯಲು ಇಟ್ಟಿದ್ದಳು. ಆಕೆಗೆ ನಿದ್ದೆ ಬಂದಿದೆ. ಹಾಲು ಉಕ್ಕಿ, ಸುಟ್ಟು ವಾಸನೆ ಇಡೀ ಹಾಸ್ಟೆಲ್ ವ್ಯಾಪಿಸಿದೆ. ಎಲ್ಲ ಹುಡುಗಿಯರು ಬಾಗಿಲು ಬಡಿದು, ಕೂಗಿ ಕರೆದರೂ ಆಕೆಗೆ ಎಚ್ಚರವಾಗಿಲ್ಲ. ವಾರ್ಡನ್‌ಗೆ ಒಳಗಿರುವ ಹುಡುಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಅನ್ನಿಸಿತಂತೆ. ಇಲ್ಲ ಮೇಡಂ ಆಕೆ ನಿದ್ದೆ ಮಾಡಿದ್ದಾಳೆ ಎಂದು ಕೆಲವು ಹುಡುಗಿಯರು ಹೇಳಿದಾಗ ಅವರು ಬೈದರಂತೆ- ಹೋಗ್ರೇ ಯಾರಾದರೂ ಜೀವಂತ ಇದ್ದವರು ಇಷ್ಟು ಗಲಾಟೆಯಾದರೂ ಎದ್ದು ಬರದೇ ಇರ್ತಾರಾ? ಆಕೆಗೆ ಎಚ್ಚರ ತಪ್ಪಿ ಹೋಗಿದೆ. ಅಂದರೆ ಏನೋ ಎಡವಟ್ಟು ಸಂಭವಿಸಿರಲೇಬೇಕು. ಕೊನೆಗೆ ಕಾವಲುಗಾರನನ್ನು ಮರ ಹತ್ತಿಸಿ ಕಿಟಕಿಯಿಂದ ನೋಡಲು ಹೇಳಲಾಯಿತು. ಅವನು ನೋಡಿದಾಗ ಗಂಗೆ ಓದುವ ಮೇಜಿನ ಮೇಲೆ ಪುಸ್ತಕದ ಮೇಲೆ ಬಿದ್ದು ಗೊರಕೆ ಹೊಡೆಯುತ್ತಿದ್ದಳು. ಅವನು ಉದ್ದವಾದ ಕೋಲನ್ನು ಒಳಗೆ ತೂರಿಸಿ ಆಕೆಯನ್ನು ಅಲುಗಾಡಿಸಿದರೂ ಉಪಯೋಗವಾಗಲಿಲ್ಲ. ಆಮೇಲೆ ಸಣ್ಣ ದೇಹದ ಅವನ ಮೊಮ್ಮಗನನ್ನು ಒಳಗೆ ದಬ್ಬಿ ಕಳಿಸಿದರು. ಅವನು ಬಾಗಿಲ ಚಿಲಕ ತೆಗೆದನು. ಎಲ್ಲ